ಸಿ.ಸಿ. ನಂಬರಃ 687/2025

ಪಿ.ಡಬ್ಲ್ಯೂಃ 1

ದಿಃ 12-03-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಪಿ.ಎಸ್.ಎನ್ ಇವರಿಂದಃ

ಆರೋಪಿತಳ ಮಾಸಿಕ ವೇತನದಿಂದ ಯಾವುದೇ ಕಂತನ್ನು ಕಡಿತಗೊಳಿಸಿದ್ದು ಇರವುದಿಲ್ಲ. ಸಾಕ್ಷಿಯು ಸ್ವತಃ ಸಾಲವನ್ನು ನೀಡುವ ಸಮಯದಲ್ಲಿ ಆರೋಪಿತಳ ವೇತನ ಪ್ರಮಾಣ ಪತ್ರವನ್ನು ಪಡೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿತಳಿಗೆ ಸುಮಾರು 2 ವರ್ಷಗಳ ಹಿಂದೆ ಸಾಲ ನೀಡಿರುತ್ತೇವೆ. ಸಾಲದ ಮೊತ್ತ ನೆನಪಿರುವುದಿಲ್ಲ. ಸಾಲದ ಕರಾರು ಪತ್ರದಲ್ಲಿ ನಮೂದಿಸಿದ ಮೊತ್ತ ನೆನಪಿರುವುದಿಲ್ಲ. ಆರೋಪಿಳಿಗೆ ಸಾಲವನ್ನು ನೀಡುವ ಸಮಯದಲ್ಲಿ ಹಣವನ್ನು ನಗದು ರೂಪದಲ್ಲಿ ಹಾಗೂ ಬ್ಯಾಂಕ್ ವರ್ಗಾವಣೆ ಮೂಲಕ ನೀಡಿರುತ್ತೇವೆ. ನಗದು ರೂಪದಲ್ಲಿ ಎಷ್ಟು ಹಣ ನೀಡಿರುತ್ತೇನೆ ಎಂದು ನೆನಪಿಗೆ ಬರುತ್ತಿಲ್ಲ. ಆರೋಪಿಯ ಬ್ಯಾಂಕ್ ಖಾತೆಗೆ ಎಷ್ಟು ಹಣವನ್ನು ವರ್ಗಾವಣೆ ಮಾಡಿರುತ್ತೇವೆ ಎಂದು ನೆನಪಿಗೆ ಬರುತ್ತಿಲ್ಲ. ಆರೋಪಿತಳ ಬ್ಯಾಂಕ್ ಖಾತೆಗೆ ಸಾಲದ ಹಣವನ್ನು ವರ್ಗಾವಣೆ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಆರೋಪಿತಳಿಂದ ಖಾಲಿ ಚೆಕ್ಕನ್ನು ಪಡೆದುಕೊಂಡು ನಮಗೆ ಬೇಕಾದ ಮೊತ್ತವನ್ನು ನಮೂದಿಸಿ ಅದನ್ನು ನಗದೀಕರಣಕ್ಕಾಗಿ ಹಾಜರುಪಡಿಸಿ, ಈ

ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತಳಿಗೆ ಯಾವುದೇ ರೀತಿಯ ಸಾಲವನ್ನು ನೀಡಿದ್ದೇ ಇರುವುದಿಲ್ಲ, ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕಿನಲ್ಲಿ ಇರುವ ಬರವಣಿಗೆಯನ್ನು ನಾವೇ ನಮಗೆ ಬೇಕಾದ ರೀತಿಯಲ್ಲಿ ಬರೆದಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕು ಹಾಗೂ ಸಾಲದ ಕರಾರು ಪತ್ರದಲ್ಲಿರುವ ಆರೋಪಿತಳ ಸಹಿ ಒಂದೇ ರೀತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಿಂದ 12 ದಾಖಲಾತಿಗಳನ್ನು ನಾವೇ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಹಾಗೂ ಆರೋಪಿತಳಿಗೆ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಜೆ ಎಂ ಎಫ್ ಸಿ, ಅಂಕೋಲಾ.